# ಮಾದರಿ ಪ್ರಶ್ನಾ ಪತ್ರಿಕೆ -11

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ.ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರಗಳನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.

1.ಬಿಹಾರದ ಕಣ್ಣೀರಿನ ನದಿ________

A. ಮಹಾನದಿ
B. ಕೋಸೀ ನದಿ
C. ಗಂಗಾ ನದಿ
D. ನರ್ಮದಾ ನದಿ

2.ಜೀವನ ಮಟ್ಟವನ್ನು ಈ ಮೂಲಕ ಅಳೆಯಲಾಗುತ್ತದೆ._______-

A. ರಾಷ್ಟ್ರೀಯ ಆದಾಯ
B. ತಲಾ ಆದಾಯ
C. ಒಟ್ಟು ಆದಾಯ
D. ಕುಟುಂಬ ಆದಾಯ

3.ಮೊದಲನೇ ಜೋಡಿ ಪದದ ಸಂಬಂಧವನ್ನು ಅರ್ಥೈಸಿ ಎರಡನೇ ಜೋಡಿ ಪದವನ್ನು ಪೂರ್ತಿಗೊಳಿಸಿರಿ.

ಅಜೀಂ ಪ್ರೇಮ್ ಜೀ :ವಿಪ್ರೋ:: ಧೀರೂಬಾಯಿ ಅಂಬಾನಿ:________

A. ಬಯೋಕಾನ್
B. ಇನ್ಫೋಸಿಸ್
C. ಅಪೋಲೋ
D. ರಿಯಲನ್ಸ್

4.________ಒಂದು ರಾಬೀ ಬೆಳೆಯಾಗಿದೆ.

A. ಭತ್ತ
B. ಗೋಧಿ
C. ಕಬ್ಬು
D. ಕಾಫಿ

5.ವಿಶ್ವ ಸಂಸ್ಥೆಯ ಸಚಿವ ಸಂಪುಟ ಎನ್ನುವ ಮಾದರಿಯಲ್ಲಿರುವ ಅಂಗ ಸಂಸ್ಥೆ ________.

A. ಭದ್ರತಾ ಸಮಿತಿ
B. ಸಾಮಾನ್ಯ ಸಭೆ
C. ಸಚಿವಾಲಯ
D. ದತ್ತಿ ಸಮಿತಿ

6. 'ಎ' ಪಟ್ಟಿಯಲ್ಲಿ ಪ್ರದೇಶಗಳನ್ನು 'ಬಿ' ಪಟ್ಟಿಯಲ್ಲಿ ಅವುಗಳು ಭಾರತದ ಒಕ್ಕೂಟಕ್ಕೆ ಸೇರಿದ ವರ್ಷಗಳನ್ನು ಸೂಚಿಸಲಾಗಿದೆ. ಇವುಗಳ ಸರಿಹೊಂದುವ ಉತ್ತರದ ಗುಂಪು.

| 'ಎ' | 'ಬಿ' |
|---|---|
| 1) ಹೈದರಾಬಾದ್ | ಎ. 1954 |
| 2) ಜಮ್ಮು ಕಾಶ್ಮೀರ | ಬಿ. 1961 |
| 3) ಗೋವಾ | ಸಿ. 1949 |
| 4) ಪಾಂಡಿಚೇರಿ | ಡಿ. 1948 |

A. 1-ಸಿ, 2-ಬಿ, 3-ಡಿ, 4-ಎ
B. 1-ಸಿ, 2-ಬಿ, 3-ಎ, 4-ಡಿ
C. 1-ಡಿ, 2-ಸಿ,3-ಬಿ, 4-ಎ
D. 1-ಡಿ, 2-ಸಿ, 3-ಅ, 4-ಬಿ

7. ಸರ್ವ ಶಿಕ್ಷಣ ಅಭಿಯಾನದಲ್ಲಿ ಕರ್ನಾಟಕ ರಾಜ್ಯದ ಬಾಲ ಕಾರ್ಮಿಕ ಮಕ್ಕಳನ್ನು ಶಾಲೆಗೆ ಕರೆತರಲು ಜಾರಿಗೆ ತಂದಿರುವ ಕಾರ್ಯಕ್ರಮ

A. ಕೂಲಿಯಿಂದ ಶಾಲೆಗೆ
B. ಮರಳಿ ಬಾ ಶಾಲೆಗೆ
C. ನಲಿ-ಕಲಿ
D. ಕೇಳಿ-ಕಲಿ

8. ನೀನು ಭಾರತದಿಂದ ನೇಪಾಳಕ್ಕೆ ಪ್ರಯಾಣಿಸುವಾಗ _________ದೇಶಗಳನ್ನು ದಾಡಿ ಹೋಗುವೆ.

A. 1
B. 0

C. 2
D. 3

9. ಬ್ಯಾಂಕಿನಲ್ಲಿ ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಬಹುದಾದ ಖಾತೆ______.

A. ನಿಶ್ಚಿತ ಠೇವಣಿ ಖಾತೆ
B. ಆವರ್ತನ ಠೇವಣಿ
C. ಉಳಿತಾಯ ಖಾತೆ
D. ಚಾಲ್ತಿ ಖಾತೆ

10. 'ರಣಜಿತ್ ಸಿಂಗ್' ನನ್ನು 'ಪಂಜಾಬಿನ ಸಿಂಹ' ಎಂದು ಕರೆಯುತ್ತೇವೆ. ಈ ಕೆಳಗಿನ ಒಂದು ಹೇಳಿಕೆಯಿಂದ ಸಮರ್ಥಿಸಿ.

A. ಅಮೃತಸರ ಲೂಧಿಯಾನಗಳ ಮೇಲೆ ಹಿಡಿತ ಸಾಧಿಸದ್ದಕ್ಕಾಗಿ
B. ಸಹಾಯಕ ಸೈನ್ಯ ಪದ್ಧತಿ ಒಪ್ಪಿದ್ದಕ್ಕಾಗಿ
C. ವಿಶ್ರಾಂತಿ ವೇತನ ಪಡೆದಕ್ಕಾಗಿ
D. ಪಂಜಾಬಿನಲ್ಲಿ ಅಧಿಪತ್ಯ ಸ್ಥಾಪಿಸಿದಕ್ಕಾಗಿ

ಆ) ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.

1. ಭಾರತ ಹೆಚ್ಚು ಲಿಖಿತ ಇತಿಹಾಸ ಆಕರಗಳನ್ನು ಹೊಂದಿರಲಿಲ್ಲ. ಏಕೆ?

2. ಒಂದನೇ ಮಹಾಯುದ್ಧದ ನಂತರ ರಾಷ್ಟ್ರ ಸಂಘ ರಚನೆಯಾಯಿತು. ಏಕೆ?

3. ಭಾಷಾವಾರು ರಾಜ್ಯವಾಗಿ ಮೊದಲು ರಚನೆಯಾದ ರಾಜ್ಯ ಆಂದ್ರಪ್ರದೇಶ. ಏಕೆ ?

4. ಸಾಂದ್ರ ಬೇಸಾಯ ಎಂದರೇನು?

5. ಸಾರಿಗೆ ಎಂದರೇನು ?

6. ಮಹಿಳಾ ಸಬಲೀಕರಣ ಅರ್ಥ ಬರೆಯಿರಿ.

7. ಭಾರತದ ಆರ್ಥಿಕ ಯೋಜನೆಯ ಪಿತಾ ಯಾರು?

8.ಉದ್ಯಮಿ ಎಂಬ ಪದವು ಯಾವ ಪದದಿಂದ ಹುಟ್ಟಿಕೊಂಡಿದೆ?

9. ಬೇಸಿಗೆ ಕಾಲದಲ್ಲಿ ಭಾರತದಲ್ಲಿ ಉಷ್ಣಾಂಶ ಅಧಿಕವಾಗಿರಲು ಕಾರಣವೇನು ?

10. ನಿರುದ್ಯೋಗ ಎಂದರೇನು ?

11. ಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳನ್ನು ಬಳಸುವಲ್ಲಿ ಎಚ್ಚರಿಕೆವಹಿಸಬೇಕು. ಏಕೆ ?

12. ವರದಕ್ಷಿಣೆ ಎಂದರೇನು?

13. ವ್ಯಾಪಾರಿಗಳಿಂದ ನಿನಗೆ ಮೋಸವಾದಾಗ ನೀನು ಕೈಗೊಳ್ಳುವ ಕ್ರಮವೇನು?

14.ಎಲ್ಲಾ ನಿರ್ಣಯಗಳು ಸದಸ್ಯ ರಾಷ್ಟ್ರಗಳ ಅವಿರೋಧದ ನೆಲೆಯಲ್ಲೇ ಇರಬೇಕು ಎಂಬ ಸೂತ್ರವೂ ಸಾರ್ಕ್ ಸಂಸ್ಥೆಯ ಪ್ರಗತಿಗೆ ತೊಡಕಾಗಿ ಪರಿಣಮಿಸಿದೆ. ಸ್ಪಷ್ಟೀಕರಿಸಿ .

ಇ.ಈ ಕೆಳಗಿನವುಗಳನ್ನು ಮೂರು ನಾಲ್ಕು ವಾಕ್ಯದಲ್ಲಿ ಉತ್ತರಿಸಿರಿ.

1. ಹಸಿರು ಕ್ರಾಂತಿಗೆ ಪ್ರೇರಣೆಯಾದ ಅಂಶಗಳನ್ನು ಬರೆ.?
2. ಸಮುದ್ರಯಾನಕ್ಕೆ ವೈಜ್ಞಾನಿಕ ಬೆಳವಣಿಗೆ ಕಾರಣ .ಸಮರ್ಥಿಸಿರಿ.
3. ಹೈದರಾಬಾದ್ ಕರ್ನಾಟಕದ ಪ್ರದೇಶಗಳು ಯಾವುವು?
4. ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಯಲ್ಲಿ ಬ್ರಹ್ಮ ಸಮಾಜದ ಪಾತ್ರ ತಿಳಿಸಿ.
5. ಜಾಗತೀಕರಣದ ಯಾವುದಾದರು ಎರಡು ಪ್ರಮುಖ ಲಕ್ಷಣ ಬರೆಯಿರಿ.
6. ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಕ್ಕಿರುವ ವ್ಯತ್ಯಾಸ ತಿಳಿಸಿ.
7. ಮಣ್ಣಿನ ಸಂರಕ್ಷಣೆಯ ವಿಧಾನಗಳು ತಿಳಿಸಿ.
8. ಮ್ಯಾಂಗ್ರೂವ್ ಅರಣ್ಯಗಳ ಲಕ್ಷಣವನ್ನು ತಿಳಿಸಿ.
9. ಭಾರತ ಜಿ.ಪಿ.ಎಸ್ ಸಂಪರ್ಕದಲ್ಲಿ ಸ್ವಾವಲಂಬನೆಯಾಗಲು ಹೇಗೆ ಪ್ರಯತ್ನಿಸುತ್ತಿದೆ?
10. ಪ್ರವಾಹ ನಿಯಂತ್ರಣದ ಕ್ರಮಗಳೇನು?
11. ಜನಸಂಖ್ಯಾ ನಿಯಂತ್ರಣದಲ್ಲಿ ಭಾರತ ಕೈಗೊಂಡಿರುವ ಕ್ರಮದ ಬಗ್ಗೆ ನಿನ್ನ ಅಭಿಪ್ರಾಯವೇನು?
12. ಅನಕ್ಷರತೆಯನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಪಟ್ಟಿ ಮಾಡಿರಿ.
13. ವರ್ಣ ಬೇಧ ನೀತಿಯು ಮಾನವತಾವಾದಕ್ಕೆ ವಿರೋಧವಾದುದು ಎಂದು ಸಮರ್ಥಿಸಿರಿ.
14. ವರ್ಸೆಲ್ ಒಪ್ಪಂದವು ಹೇಗೆ ಎರಡನೇ ಯುಧ್ಧಕ್ಕೆ ಕಾರಣವಾಯಿತು?
15. ಜನಮಂದೆಯ ಸ್ವರೂಪವನ್ನು ತಿಳಿಸಿ.?

ಈ. ಈ ಕೆಳಗಿನ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯದಲ್ಲಿ ಉತ್ತರಿಸಿರಿ.

1. 1857ರ ದಂಗೆಗೆ ಆರ್ಥಿಕ ಮತ್ತು ಆಡಳಿತಾತ್ಮಕ ಅಂಶಗಳು ಹೇಗೆ ಪ್ರಚೋದಕವಾದವು?

ಅಥವಾ

ಸಾರಿಗೆ ಸಂಪರ್ಕವು ಸ್ವಾತಂತ್ರ್ಯ ಚಳುವಳಿಯ ಮೂಲ. ಈ ಹೇಳಿಕೆಯನ್ನು ಸಮರ್ಥಿಸಿರಿ.

2.ಪಂಚಶೀಲ ತತ್ವಗಳನ್ನು ಪಟ್ಟಿ ಮಾಡಿರಿ.

ಅಥವಾ

ಭಾರತವು ರಷ್ಯಾದೊಂದಿಗೆ ಹೊಂದಿರುವ ಸಂಬಂಧವನ್ನು ತಿಳಿಸಿರಿ.

3.ಜೈವಿಕ ತಂತ್ರಜ್ಞಾನದಿಂದ ಕೃಷೀ ಕ್ಷೇತ್ರದ ಮೇಲಿನ ಪರಿಣಾಮವೇನು?

ಅಥವಾ

ಶಕ್ತಿ ಸಂಪನ್ಮೂಲದ ಕೊರತೆಯನ್ನು ನಿವಾರಿಸಲು ನಿಮ್ಮ ಸಲಹೆಯೇನು?

4.ಅಸ್ಪೃಶ್ಯತಾ ನಿವಾರಣೆಯ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳು ಯಾವುವು?

ಅಥವಾ

ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳನ್ನು ಪಟ್ಟಿ ಮಾಡಿರಿ.

5.ಕೊರತೆಯ ಹಣಕಾಸು ಎಂದರೇನು?ಅದರ ನಾಲ್ಕು ವಿಧಗಳನ್ನು ತಿಳಿಸಿ.

ಅಥವಾ

ಗ್ರಾಮೀಣ ಅಭಿವೃದ್ಧಿಯ ಮಹತ್ವವನ್ನು ತಿಳಿಸಿ.

6. ವಿಮಾ ಸಂಸ್ಥೆಯಿಂದಾಗುವ ಯಾವುದಾದರು ಆರು ಅನುಕೂಲಗಳನ್ನು ತಿಳಿಸಿ.

ಅಥವಾ

ಬ್ಯಾಂಕು ಸಲ್ಲಿಸುವ ಸೇವೆಗಳನ್ನು ಪಟ್ಟಿ ಮಾಡಿರಿ.

ಉ. ಈ ಪ್ರಶ್ನೆಗೆ ಎಂಟರಿಂದ ಹತ್ತು ವಾಕ್ಯದಲ್ಲಿ ಉತ್ತರಿಸಿರಿ.

ನೆಹರೂರವರು ಪ್ರಧಾನಮಂತ್ರಿಯಾದ ನಂತರ ರಾಷ್ಟ್ರಕ್ಕೆ ನೀಡಿದ ಪ್ರಮುಖ ಕೊಡುಗೆಗಳನ್ನು ವಿವರಿಸಿರಿ.

ಊ. ಭಾರತದ ನಕಾಶೆ ಬಿಡಿಸಿ ಇವುಗಳನ್ನು ಗುರುತಿಸಿರಿ.

A. 231/2 ಉತ್ತರ ಅಕ್ಷಾಂಶ
B. ಅಂಕಲೇಶ್ವರ
C. ರೋಯಿಲ್ಲ
D. ಹಿರಾಕುಡ್ ಯೋಜನೆ

( ಮೂರೇ ಗುರುತಿಸಲು ಇರುವುದು)


<u>ಪ್ರಶ್ನಾ ಪತ್ರಿಕೆಯನ್ನು ರಚನೆ ಮಾಡಿದವರು:</u>

I. ಮಹಮ್ಮದ್ ತುಂಬೆ ಪ್ರೌಢ ಶಾಲೆ ಸುಜೀರು
II. ರಂಜಿತಾ ರಾಜೀವ , ಪ್ರೌಢ ಶಾಲೆ ಪೊಳಲಿ
III. ಗೀತಾ ದೇವಳಿ, ಪ್ರೌಢ ಶಾಲೆ ಕೋಣಾಜೆ ಪದವು
IV. ಸುನಿತಾ ದೇವಾಡಿಗ, ಪ್ರೌಢ ಶಾಲೆ ಸರಪಾಡಿ
V. ಆಲ್ವಿನ್ ರೋಡ್ರಿಗಸ್ , ರೋಜಾಮಿಸ್ಟಿಕಾ ಕಿನ್ನಿಗಂಬಳ
VI. ಸಾಧು , ದೀಪಿಕಾ ಮೊಡಂಕಾಪು.
VII. ಗೀತಾ.ಡಿ. ಪ್ರೌಢ ಶಾಲೆ ಉಳ್ಳಾಲ ಕೋಟೆಪುರ
VIII. ಮರ್ಲಿನ್ , ಪ್ರೌಢ ಶಾಲೆ ಮೂಡುಶೆಡ್ಡೆ
IX. ಲೋಕಯ್ಯ, ಪ್ರೌಢ ಶಾಲೆ ಸುಳ್ಯ
X. ಸಿಂಥಿಯಾ ಸೇಕ್ರೆಡ್ ಹಾರ್ಟ್ ಕುಲಶೇಖರ